# PRESS CLIPPINGS

**EQUATOR**
Full Circle MPR Consulting

Region:

| | | | |
|---|---|---|---|
| Client | : Bangalore Nano 2008 | Lead | : Inauguration Bangalore Nano |
| Publication | : Vijay Karnataka | Date | : 14 Dec 2008 |
| Section | : Pg - 6 | Method | : Conference |

# ಜನರ ಆರೋಗ್ಯ, ಸುರಕ್ಷೆಯ ಕಾಳಜಿ ಇರಲಿ

**ವಿಕ ಸುದ್ದಿಲೋಕ**

**ಬೆಂಗಳೂರು:** ದೇಶದಲ್ಲಿ ನ್ಯಾನೊ ತಂತ್ರಜ್ಞಾನ ಅಳವಡಿಸುವಾಗ ಜನಸಾಮಾನ್ಯರ ಆರೋಗ್ಯ, ಸುರಕ್ಷತೆ ಹಾಗೂ ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಉಪರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ ಹೇಳಿದ್ದಾರೆ.

ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯು ನಗರದಲ್ಲಿ ಶನಿವಾರ ಏರ್ಪಡಿಸಿದ್ದ ದ್ವಿತೀಯ 'ಬೆಂಗಳೂರು ನ್ಯಾನೊ ಸಮ್ಮೇಳನ' ಉದ್ಘಾಟಿಸಿ ಮಾತನಾಡಿದರು.

ನ್ಯಾನೊ ತಂತ್ರಜ್ಞಾನದ ಸಂಶೋಧನೆ ಮತ್ತು ಉಪಯೋಗದಿಂದ ದೇಶದ ಆರ್ಥಿಕತೆ ಹಾಗೂ ಕೈಗಾರಿಕಾ ವಲಯ ಅಭಿವೃದ್ಧಿಗೊಳ್ಳಲಿದೆ. ಆರೋಗ್ಯ, ಕೃಷಿ, ಕುಡಿಯುವ ನೀರು, ಸ್ವಚ್ಛತೆ, ಪರಿಸರ ಸಂರಕ್ಷಣೆ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಕಾರಿ ಬದಲಾವಣೆ ಕಾಣಬಹುದು. ಆ ಮೂಲಕ ಈ ತಂತ್ರಜ್ಞಾನದ ಅಭಿವೃದ್ಧಿಯು ಭಾರತದ ಉಜ್ವಲ ಭವಿಷ್ಯವನ್ನು ನಿರ್ಧರಿಸುತ್ತದೆ. ಆದರೆ ಇಂಥ ಬದಲಾವಣೆಯಿಂದ ಜನರ ಬದುಕು ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರುವ ಅಪಾಯವೂ ಇವೆ. ಹೀಗಿರುವಾಗ, ವಿಜ್ಞಾನಿಗಳು, ಕೈಗಾರಿಕೆ, ಸಂಶೋಧಕರು ಹಾಗೂ ತಜ್ಞರು ಒಂದಾಗಿ ಇಂಥ ಸವಾಲು- ಸಮಸ್ಯೆ ಬಗೆಹರಿಸುವ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ನ್ಯಾನೊ ತಂತ್ರಜ್ಞಾನ ಗ್ರಾಹಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಅಭಿವೃದ್ಧಿಗೊಂಡರೆ, ಬಹುಪಾಲು ಕೃಷಿಯನ್ನು ಅವಲಂಬಿಸಿರುವ ದೇಶದ ರೈತರು, ಬಡವರ ಆರೋಗ್ಯಕ್ಕೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಇದನ್ನು ಜನಸಾಮಾನ್ಯರ ಸಮಸ್ಯೆ- ಅಗತ್ಯಕ್ಕೆ ಬಳಸಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ ಎಂದು ಅಭಿಪ್ರಾಯಪಟ್ಟರು.

## ಬೆಂಗಳೂರು ನ್ಯಾನೊ ಸಿಟಿ

ಸಮ್ಮೇಳನದಲ್ಲಿ ಬೆಂಗಳೂರು ನಗರವನ್ನು ದೇಶದ 'ನ್ಯಾನೊ ಸಿಟಿ'ಯಾಗಿ ಘೋಷಣೆ ಮಾಡಲಾಯಿತು. ನ್ಯಾನೊ ವಿಷನ್ ತಂಡವು ಈ ನಿರ್ಧಾರ ಕೈಗೊಂಡಿದ್ದು, ರಾಜ್ಯಪಾಲ ರಾಮೇಶ್ವರ ಠಾಕೂರ್ ಘೋಷಣಾ ಪತ್ರವನ್ನು ಬಿಡುಗಡೆ ಮಾಡಿದರು. ಇದರಿಂದ ಮುಂದಿನ ದಿನಗಳಲ್ಲಿ ಕರ್ನಾಟಕಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರದಿಂದ ನ್ಯಾನೊ ತಂತ್ರಜ್ಞಾನದ ಅಭಿವೃದ್ಧಿ- ಸಂಶೋಧನೆಗೆ ಹೆಚ್ಚಿನ ನೆರವು, ಆದ್ಯತೆ ಲಭಿಸಲಿದೆ. ಆ ಮೂಲಕ ಐಟಿ-ಬಿಟಿ ನಂತರ ಬೆಂಗಳೂರು ನ್ಯಾನೊ ಸಿಟಿಯಾಗಿ ಕೂಡ ಜಾಗತಿಕ ಮಟ್ಟದಲ್ಲಿ ಹೆಸರು ಪಡೆದುಕೊಳ್ಳಲಿದೆ.

ವಿಕ ಚಿತ್ರಲೋಕ




**ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ದ್ವಿತೀಯ 'ಬೆಂಗಳೂರು ನ್ಯಾನೊ ಸಮ್ಮೇಳನ'ದಲ್ಲಿ ಉಪ ರಾಷ್ಟ್ರಪತಿ ಎಂ. ಹಮೀದ್ ಅನ್ಸಾರಿ ಹಾಗೂ ರಾಜ್ಯಪಾಲ ರಾಮೇಶ್ವರ ಠಾಕೂರ್ 'ಬೆಂಗಳೂರು, ದೇಶದ ನ್ಯಾನೊ ಸಿಟಿ' ಎನ್ನುವ ಘೋಷಣಾ ಪತ್ರವನ್ನು ಬಿಡುಗಡೆ ಮಾಡಿದರು. ಪ್ರೊ.ಸಿ.ಎನ್.ಆರ್. ರಾವ್, ಗೃಹ ಸಚಿವ ಡಾ.ವಿ.ಎಸ್. ಆಚಾರ್ಯ ಉಪಸ್ಥಿತರಿದ್ದರು.**

ರಾಜ್ಯಪಾಲ ರಾಮೇಶ್ವರ ಠಾಕೂರ್ ಮಾತನಾಡಿ, ರಾಜ್ಯದಲ್ಲಿ ನ್ಯಾನೊ ತಂತ್ರಜ್ಞಾನದ ಅಳವಡಿಕೆಗೆ ಸರಕಾರ ಅನೇಕ ಕಾರ್ಯಯೋಜನೆ ಅನುಷ್ಠಾನಗೊಳಿಸುತ್ತಿದೆ. ನ್ಯಾನೊ ಸೈನ್ಸ್ ಬಗ್ಗೆ ಕೇವಲ ವಿಜ್ಞಾನಿಗಳು ಮಾತ್ರವಲ್ಲ ಜನಸಾಮಾನ್ಯರು ಕೂಡ ಬಹಳ ನಿರೀಕ್ಷೆಯಿಟ್ಟುಕೊಂಡಿದ್ದಾರೆ. ಇದು ಮನುಷ್ಯನ ಜೀವನದ ಅನುಕೂಲಕ್ಕೆ ಬಳಕೆಯಾಗುವ ಕಾರಣ ಅವುಗಳ ದುಷ್ಪರಿಣಾಮದ ಬಗ್ಗೆಯೂ ಎಚ್ಚರಿಕೆ ಅವಶ್ಯಕ. ಬೆಂಗಳೂರು ನ್ಯಾನೊ ಸಮ್ಮೇಳನವು ಕರ್ನಾಟಕದಲ್ಲಿ ಈ ತಂತ್ರಜ್ಞಾನದ ಸಂಶೋಧನೆ-ಅಭಿವೃದ್ಧಿಗೆ ಹೆಚ್ಚಿನ ಉತ್ತೇಜನ ನೀಡಲಿದೆ ಎಂದು ತಿಳಿಸಿದರು.

ಗೃಹ ಸಚಿವ ವಿ.ಎಸ್. ಆಚಾರ್ಯ, ವಿಜ್ಞಾನಿ ಪ್ರೊ.ಸಿ.ಎನ್.ಆರ್. ರಾವ್, ಮಾಹಿತಿ ತಂತ್ರಜ್ಞಾನ ಇಲಾಖೆ ಪ್ರಧಾನ ಕಾರ್ಯದರ್ಶಿ ಅಶೋಕ್ ಸಿ. ಮನೋಳಿ ಉಪಸ್ಥಿತರಿದ್ದರು.